ಪಿ.ಡಬ್ಲೂ-1

**<u>ದಿಃ 16.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಕೆ.ವಿ.ಎನ್ ವಕೀಲರಿಂದಃ 8 ರಿಂದ 10 ನೇ ಪ್ರತಿವಾದಿಯರ ಪರವಾಗಿಃ</u>**

9) ನನಗೆ ಓದಲು ಮತ್ತು ಬರೆಯಲು ಬರುವದಿಲ್ಲ. ಈ ಪ್ರಕರಣವನ್ನು ದಾಖಲಿಸಲು ನಮ್ಮ ವಕೀಲರಿಗೆ ನಾನೇ ಸ್ವತಃ ಮಾಹಿತಿ ಕೊಟ್ಟಿರುತ್ತೇನೆ. ಈ ಪ್ರಕರಣದಲ್ಲಿ ಪ್ರತಿವಾದಿ ನಂ.8 ರಿಂದ 10 ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ಪ್ರತಿವಾದಿ ನಂ.8 ರಿಂದ 10 ಇವರು ಈ ಪ್ರಕರಣದಲ್ಲಿ ಸಲ್ಲಿಸಿದಂತಹ ಪ್ರತಿವಾದ ಪತ್ರವನ್ನು ನಾನು ನಮ್ಮ ವಕೀಲರ ಮುಖಾಂತರ ಓದಿ ಹೇಳಿ ತಿಳಿದುಕೊಂಡಿರುವದಿಲ್ಲ. ನನ್ನ ಅಜ್ಜನ ಹೆಸರು ಚಿಕ್ಕಪ್ಪ ಅಂತಾ ಇರುತ್ತದೆ. ನಮ್ಮ ಅಜ್ಜನಿಗೆ ಕೇವಲ ಇಬ್ಬರು ಗಂಡು ಮಕ್ಕಳು ಇದ್ದರು ಹಾಗೂ ಒಬ್ಬಳು ಹೆಣ್ಣುಮಗಳು ಇರುತ್ತಾರೆ. ಅದೇ ರೀತಿ ಇಬ್ಬರು ಗಂಡುಮಕ್ಕಳಲ್ಲಿ ಒಬ್ಬನ ಹೆಸರು ಗುಡ್ಡಪ್ಪ ಅಂತಾ ಇರುತ್ತದೆ, ಇನ್ನೊಬ್ಬನ ಹೆಸರು ಬಿದ್ದಾಡೆಪ್ಪ ಅಂತಾ ಇರುತ್ತದೆ.

10) ಗುಡ್ಡಪ್ಪ ಮತ್ತು ಬಿದ್ದಾಡೆಪ್ಪ ಇಬ್ಬರ ಸಹೋದರಿಯ ಹೆಸರು ಯಲ್ಲಮ್ಮ ಅಂತಾ ಇತ್ತು. ನನ್ನ ತಾಯಿಯ ಹೆಸರು ದೊಡ್ಡಗಂಗಮ್ಮ ಅಂತಾ ಇತ್ತು. ನಮ್ಮ ತಂದೆಯಾದ ಗುಡ್ಡಪ್ಪ ಈತನಿಗೆ ನಾವು ಇಬ್ಬರು ಮಕ್ಕಳು ಇರುತ್ತೇವೆ. ಒಬ್ಬಳು ನಾನು ಮತ್ತು ಇನ್ನೊಬ್ಬ ನನ್ನ ಸಹೋದರ ಕಾಳಪ್ಪ ಅಂತಾ ಇರುತ್ತಾನೆ. ನನಗೆ ಮೂರು ಜನ ಮಕ್ಕಳು ಇರುತ್ತಾರೆ. ಅದರಲ್ಲಿ

ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ಸದರಿ ಹೆಣ್ಣುಮಗಳ ಹೆಸರು ಕೆಂಚವ್ವ ಅಂತಾ ಇರುತ್ತದೆ. ನನ್ನ ಮಗಳಾದ ಕೆಂಚವ್ವ ಈಕೆಯನ್ನು ನನ್ನ ಅಣ್ಣನ ಮಗನಾದ ಕರಿಯಪ್ಪ ಈತನ ಜೊತೆ ಮದುವೆ ಮಾಡಿಕೊಟ್ಟಿರುತ್ತೇನೆ.

**11)** ಸದರಿ ಕೆಂಚವ್ವ ಮತ್ತು ಕರಿಯಪ್ಪ ಇಬ್ಬರೂ ಸಹ ಈ ಪ್ರರಕಣದಲ್ಲಿ ಪಕ್ಷಗಾರರು ಇರುತ್ತಾರೆ. ಕರಿಯಪ್ಪ ಈತನು ಮೃತಪಟ್ಟಿರುತ್ತಾನೆ. ಕೆಂಚವ್ವ ಆತನ ಹೆಂಡತಿ ಈ ಪ್ರಕರಣದಲ್ಲಿ ಪ್ರತಿವಾದಿ ನಂಬರಃ 4 ಇರುತ್ತಾಳೆ. ಸದರಿ ಕರಿಯಪ್ಪನ ಮಕ್ಕಳ ಹೆಸರು ಬೋಜಪ್ಪ ಪ್ರತಿವಾದಿ ನಂ.5 ಮತ್ತು ಶಿವಗಂಗಮ್ಮ ಪ್ರತಿವಾದಿ ನಂ.6 ಮತ್ತು ಅದೇ ರೀತಿ ಗುಡ್ಡಪ್ಪ ಪ್ರತಿವಾದಿ ನಂ.7 ಎನ್ನುವ ಮಕ್ಕಳು ಇರುತ್ತಾರೆ. ದ್ಯಾಮವ್ವ ಈಕೆ ಕಾಳಪ್ಪನ ಮಗಳಾಗಿರುತ್ತಾಳೆ. ಆಕೆ ಈಗ ಮೃತಪಟ್ಟಿರುತ್ತಾಳೆ. ದ್ಯಾಮವ್ವನಿಗೆ ಒಬ್ಬ ಮಗಳು ಮತ್ತು ಗಂಡ ಇರುತ್ತಾರೆ. ಆಕೆಯ ಮಗಳ ಹೆಸರು 3 ನೇ ಪ್ರತಿವಾದಿ ಬಂದವ್ವ ಅಂತಾ ಇರುತ್ತದೆ. ಸದರಿ ಬಂದವ್ವ ಈಕೆಯನ್ನು ಕಾಳಪ್ಪನ ಮಗನಾದ ತಮ್ಮಣ್ಣ 2 ನೇ ಪ್ರತಿವಾದಿ ಈತನ ಜೊತೆ ಮದುವೆ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿ.ಈ ಪ್ರಕರಣದಲ್ಲಿ ನಮ್ಮ ಅತ್ತೆಯಾದಂತಹ ಯಲ್ಲವ್ವನಾಗಲೀ ಮತ್ತು ದ್ಯಾಮವ್ವಳ ಗಂಡನಾದ ತಿಪ್ಪಣ್ಣ ಈತನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ.

**12)** 1952 ನೇ ಇಸ್ವಿಯಲ್ಲಿ ಗುಡ್ಡಪ್ಪ ಮತ್ತು ಬಿದ್ದಾಡೆಪ್ಪ ಇವರಿಬ್ಬರಿಗೂ ಸೇರಿದ ಎಲ್ಲ ಕೃಷಿ ಜಮೀನುಗಳಲ್ಲಿ ಪಾಲು ವಾಟ್ನಿ ಮಾಡಿಕೊಂಡಿದ್ದರು ಅಂದರೆ ಸರಿ. ಸದರಿ ಪಾಲುವಾಟ್ನಿಯ ಪ್ರಕಾರ

ಗುಡ್ಡಪ್ಪ ಮತ್ತು ಬಿದ್ದಾಡೆಪ್ಪ ಇವರು ಅವರವರ ಪಾಲಿಗೆ ಬಂದಂತಹ ಕೃಷಿ ಜಮೀನುಗಳಲ್ಲಿ ಕಂದಾಯ ದಾಖಲಾತಿಗಳಲ್ಲಿ ತಮ್ಮ ಹೆಸರುಗಳನ್ನು ಮ್ಯೂಟೇಶನ ಆದೇಶದ ಪ್ರಕಾರ ವರ್ಗಾವಣೆ ಮಾಡಿಕೊಂಡಿರುತ್ತಾರೆ ಅಂದರೆ ಸರಿ.

**14)** ಗುಡ್ಡಪ್ಪ ಈತನ ಪಾಲಿಗೆ ಬಂದಂತಹ ಕೃಷಿ ಜಮೀನುಗಳನ್ನು ಗುಡ್ಡಪ್ಪನ ಮಕ್ಕಳಾದ ಡಿಳ್ಳೆಪ್ಪ ಮತ್ತು ಕರಿಯಪ್ಪ ಮತ್ತು ತಮ್ಮಣ್ಣಿ ಇವರೆಲ್ಲರೂ ಸೇರಿ ಒಟ್ಟಾಗಿ ತಮ್ಮ ಕಬ್ಜೆಯಲ್ಲಿ ಇಟ್ಟು ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಅಂದರೆ ಸರಿ, ಆದರೆ ಸಾಕ್ಷಿಯು ಅದರಲ್ಲಿಯೂ ಸಹ ನನಗೂ ಪಾಲು ಇರುತ್ತದೆ ಎಂದು ನುಡಿಯುತ್ತಾರೆ. ಗುಡ್ಡಪ್ಪ ಈತನು ಅಂದಾಜು 34 ವರ್ಷದ ಹಿಂದೆ ಮೃತಪಟ್ಟಿರುತ್ತಾನೆ. ಗುಡ್ಡಪ್ಪ ನಮ್ಮ ತಂದೆ ಮೃತಪಟ್ಟ ನಂತರ ನಾನು ಮತ್ತು ನನ್ನ ಅಣ್ಣನಾದ ಕಾಳಪ್ಪ ಈತನ ಹೆಸರಿಗೆ ನನಗೆ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಪ್ರಕಾರ ಜಮೀನುಗಳಲ್ಲಿ ಇರುವಂತಹ ಪಾಲನ್ನು ಕುರಿತಾಗಿ ಕಾಳಪ್ಪನ ಹೆಸರನ್ನು ಕಂದಾಯ ದಾಖಲಾತಿಗಳಲ್ಲಿ ವರ್ಗಾವಣೆ ಮಾಡಿಕೊಳ್ಳಲು ಯಾವುದೇ ರೀತಿ ತಕರಾರು ಇರುವದಿಲ್ಲ ಎನ್ನುವ ಕುರಿತಾಗಿ ಬರೆದುಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

**15)** ಆ ರೀತಿ ನಾನು ಕಂದಾಯ ಇಲಾಖೆಗೆ 1969 ರಲ್ಲಿ ಕಂದಾಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿದ್ದರಿಂದ ಸದರಿ ವರದಿ ಆಧಾರದ ಮೇಲೆ ಕಂದಾಯ ಅಧಿಕಾರಿಗಳು ಡ ನಂಬರ ಮಂಜೂರು ಮಾಡಿ ನನ್ನ ಪಾಲಿನ ಹಸೆರಿನಲ್ಲಿರುವ ಆಸ್ತಿಗಳನ್ನು  ನನ್ನ ಸಹೋದರ

ಕಾಳಪ್ಪನ ಹೆಸರಿನಲ್ಲಿ ವರ್ಗಾವಣೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ತಂದೆ ಮೃತಪಟ್ಟ ನಂತರ ನಾನು ಕಂದಾಯ ಅಧಿಕಾರಿಗಳಿಗೆ ವರದಿ ಸಲ್ಲಿಸಿದ ಬಳಿಕ ನಮ್ಮ ಒಟ್ಟು ಕುಟುಂಬದ ಜಮೀನುಗಳಲ್ಲಿ ನನ್ನ ಪಾಲಿನ ಜಮೀನುಗಳನ್ನು ಸೇರಿಕೊಂಡು ಮತ್ತು ಕಾಳಪ್ಪ ಈತನ ಜಮೀನುಗಳಲ್ಲಿ ಆತನೇ ಕಬ್ಜೆ ಹೊಂದಿ ಇವತ್ತಿಗೂ ಸಹ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾನೆ ಅಂದರೆ ಸರಿಯಲ್ಲ. ಇವತ್ತಿಗೂ ಸಹ ದಾವಾ ಆಸ್ತಿಗಳು ಕಾಳಪ್ಪನ ಹೆಸರಿನಲ್ಲಿ ಇರುತ್ತವೆ ಅಂದರೆ ಸರಿ, ಆದರೆ ಸದರಿ ಕಾಳಪ್ಪನ ಹೆಸರು ಕಂದಾಯ ದಾಖಲಾತಿಗಳಲ್ಲಿ ಹೇಗೆ ಬಂದವು ಎಂದು ನನಗೆ ಗೊತ್ತಿರುವದಿಲ್ಲ. ನಮ್ಮ ತಂದೆ ಮೃತಪಟ್ಟ ನಂತರ ಇವತ್ತಿನವರೆಗೂ ಸಹ ನಾನು ನಮ್ಮ ಒಟ್ಟು ಕುಟುಂಬದ ಜಮೀನುಗಳ ಕುರಿತಾಗಿ ಯಾವುದೇ ರೀತಿ ದಾಖಲಾತಿಗಳನ್ನು ತೆಗೆಯಿಸಿ ನೋಡಿ ಪರಿಶೀಲನೆ ಮಾಡಿರುವದಿಲ್ಲ.

**16)** ನನಗೆ ಈ ಪ್ರಕರಣವನ್ನು ದಾಖಲಿಸುವ 4 ತಿಂಗಳ ಮೊದಲು ಈ ಪ್ರಕರಣದಲ್ಲಿ ಹೇಳಿದಂತಹ ಎಲ್ಲ ಆಸ್ತಿಗಳು ನನ್ನ ಸಹೋದರನಾದ ಕಾಳಪ್ಪನ ಹೆಸರಿನಲ್ಲಿ ದಾಖಲಾಗಿರುತ್ತವೆ ಎನ್ನುವ ವಿಷಯ ತಿಳಿದು ಬಂದಿರುತ್ತದೆ. ಕಾಳಪ್ಪನ ಹೆಸರಿನಲ್ಲಿ ಎಲ್ಲ ದಾವಾ ಆಸ್ತಿಗಳು ವರ್ಗಾವಣೆಯಾದ ನಂತರ ಆತನ ಜೀವಂತ ಕಾಲದಲ್ಲಿ ದಾವಾ ಆಸ್ತಿಗಳನ್ನು ಆತನ ಮಕ್ಕಳ ನಡುವೆ ಪಾಲುವಾಟ್ನಿ ಮಾಡಿಕೊಟ್ಟಿರುತ್ತಾನೆ ಅಂದರೆ ಸರಿ. ಆದರೆ ಸಾಕ್ಷಿಯು ನನಗೆ ದಾವಾ ಆಸ್ತಿಗಳಲ್ಲಿ ಪಾಲು ಬೇಕು ಎಂದು ಕೇಳುತ್ತಾಳೆ. ಈಗಲೂ ಸಹ ದಾವಾ ಆಸ್ತಿಗಳು ಕಾಳಪ್ಪನ ಮಕ್ಕಳ ಹೆಸರಿನಲ್ಲಿ

ದಾಖಲಾಗಿರುತ್ತವೆ ಅಂದರೆ ಸರಿ, ಆದರೆ ಸಾಕ್ಷಿಯು ಮುಂದುವರೆದು ದಾವಾ ಆಸ್ತಿಗಳಲ್ಲಿ ತನಗೂ ಸಹ ಪಾಲು ಬೇಕು ಎಂದು ಕೇಳಿಕೊಳ್ಳುತ್ತಾಳೆ.

**17)** ನಾನು 1948 ನೇ ಇಸ್ವಿಯ ಪೂರ್ವದಲ್ಲಿಯೇ ಜನನ ಹೊಂದಿರುತ್ತೇನೆ ಅಂದರೆ ಆ ವಿಷಯ ನನಗೆ ಗೊತ್ತಿರುವದಿಲ್ಲ. ಕಾಳಪ್ಪನ ಹೆಸರಿನಲ್ಲಿ ಬಂದಂತಹ ಆಸ್ತಿಗಳ ಕುರಿತಾಗಿ ನಾನು ಕಂದಾಯ ದಾಖಲಾತಿಗಳ ಕುರಿತಾಗಿ ಯಾವುದೇ ಪ್ರಾಧಿಕಾರದ ಮುಂದೆ ಆಗಲಿ ಮತ್ತು ಯಾವುದೇ ನ್ಯಾಯಾಲಯಗಳಲ್ಲಿ ಆಗಲೀ ಪ್ರಶ್ನೆ ಮಾಡಿರುವದಿಲ್ಲ ಅಂದರೆ ಸರಿ. ಆ ರೀತಿ ಕಾಳಪ್ಪನ ಹೆಸರುಗಳು ದಾವಾ ಆಸ್ತಿಗಳಲ್ಲಿ ಬಂದು ಸುಮಾರು 50 ವರ್ಷಗಳು ಆಗಿರುತ್ತವೆ ಅಂದರೆ ಸರಿ. ಈಗಲೂ ಸಹ ನಮ್ಮ ಅಣ್ಣನಾದ ಕಾಳಪ್ಪ ಈತನು ದಾವಾ ಜಮೀನುಗಳಲ್ಲಿ ಮಾಡಿಕೊಟ್ಟಂತಹ ಪಾಲು ವಾಟ್ನಿಯ ಪ್ರಕಾರ ಆತನ ಮಕ್ಕಳ ಹೆಸರಿನಲ್ಲಿ ಬಂದಂತಹ ಜಮೀನಿನಲ್ಲಿ 1 ನೇ ಪ್ರತಿವಾದಿ ಡಿಳ್ಳೆಪ್ಪ ಈತನ ಹೆಸರು ಇರುತ್ತದೆ ಅಂದರೆ ಸರಿ, ಈಗಲೂ ಸಹ ಆತನೇ ಕಬ್ಜೆ ಹೊಂದಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾನೆ ಅಂದರೆ ಸರಿ.

**18)** ಸದರಿ ಡಿಳ್ಳೆಪ್ಪ ಮತ್ತು ಆತನ ಹೆಂಡತಿ ಮತ್ತು ಮಕ್ಕಳು ಬೇರೆ ಬೇರೆ ಕಡೆ ದುಡಿಕೊಂಡು ಬಂದು ದಾವಾ ಕೃಷಿ ಜಮೀನಗಳಲ್ಲಿಯ ಸರ್ವೆ ನಂಬರಃ 404/1 ಈ ಆಸ್ತಿಯನ್ನು ಆತನ ಸ್ವಂತ ಉತ್ಪನ್ನದಿಂದ ಖರೀದಿ ತೆಗೆದುಕೊಂಡಿರುತ್ತಾನೆ ಅಂದರೆ ಸರಿಯಲ್ಲ. ಸರ್ವೆ ನಂಬರಃ 404/1 ಈ ಅಸ್ತಿಯು ನನ್ನ ಸಹೋದರನಾದ ಕಾಳಪ್ಪ ಈತನ ಮಗನಾದ ಡಿಳ್ಳೆಪ್ಪ 1 ನೇ ಪ್ರತಿವಾದಿಗೆ ಆತನ ತಂದೆಯಿಂದ ಬಂದಿರುತ್ತದೆ, ಆದರೆ ಅದು

ಯಾವುದೇರೀತಿಯಿಂದ ಆತನ ಹೆಸರಿನಲ್ಲಿ ಬಂದಿರುವದಿಲ್ಲ. ಸದರಿ ಸರ್ವೆ ನಂಬರಃ 404/1 ಈ ಆಸ್ತಿಯು ಡಿಳ್ಳೆಪ್ಪ ಈತನಿಗೆ ಆತನ ತಂದೆಯಿಂದ ಬಂದಿರುತ್ತದೆ ಎನ್ನುವ ವಿಷಯದ ಕುರಿತಾಗಿ ನಾನು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ಸರ್ವೆ ನಂಬರಃ 404/1 ಈ ಆಸ್ತಿಯು 1 ನೇ ಪ್ರತಿವಾದಿ ಡಿಳ್ಳೆಪ್ಪ ಈತನೆ ಹೆಸರಿಗೆ ಆತನ ತಂದೆಯಿಂದ ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**19)** ಡಿಳ್ಳೆಪ್ಪ ಈತನೂ ಸಹ ಸಾಗುವಳಿ ಮಾಡುತ್ತಿದ್ದ ಜಮೀನುಗಳನ್ನು ಅಭಿವೃದ್ದಿಪಡಿಸಲು ಆತನ ಹಣಕಾಸಿನ ಅಡಚಣೆ ಇದ್ದುದರಿಂದ ಆತನಿಗೆ ಸಾಕಷ್ಟು ಹಣಕಾಸಿನ ಅಡಚಣೆ ಇದ್ದುದರಿಂದ ಡಿಳ್ಳೆಪ್ಪ ಈತನು ಸಾಕಷ್ಟು ಸಾಲವನ್ನು ಮಾಡಿದ್ದ ಅಂದರೆ ಸರಿ. ಆದ್ದರಿಂದ ಡಿಳ್ಳೆಪ್ಪ ಈತನು ಸರ್ವೆ ನಂಬರಃ 404/1 ಮತ್ತು ಸರ್ವೆ ನಂಬರಃ 403/2 ಎರಡು ಆಸ್ತಿಗಳನ್ನು ಮಾರಾಟಕ್ಕೆ ಹಚ್ಚಿದ್ದನು ಅಂದರೆ ಸರಿ, ಆದರೆ ಸಾಕ್ಷಿಯು ಮುಂದುವರೆದು ಡಿಳ್ಳೆಪ್ಪ ಈತನು ಸ್ವತಃ ಸಾಲವನ್ನು ಮಾಡಿಕೊಂಡಿದ್ದ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಸಾಲವನ್ನು ಮರುಪಾವತಿ ಮಾಡಲು ಸರ್ವೆ ನಂಬರಃ 404/1 ಹಾಗೂ ಸರ್ವೆ ನಂಬರಃ 403/2 ಎರಡೂ ಆಸ್ತಿಗಳನ್ನು ಸೇರಿ ಒಟ್ಟು ರೂ.9,50,000/- ಗಳಿಗೆ 8 ನೇ ಪ್ರತಿವಾದಿಯಾದಂತಹ ಚಿದಾನಂದ ಈತನಿಗೆ ದಿನಾಂಕಃ 02.05.2018 ರಂದು ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿದ್ದಾನೆ ಅಂದರೆ ಸದರಿ ವಿಷಯ ನನಗೆ ಗೊತ್ತಿರುವದಿಲ್ಲ. ಸದರಿ ಖರೀದಿ ಪತ್ರದ ಆನಲೈನ ದೃಡೀಕೃತ ಪ್ರತಿಯನ್ನು

ನಿ.ಪಿ-34 ರಂತೆ ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ನಿ.ಪಿ-34 ನ್ನು ಡಿಳ್ಳೆಪ್ಪ ಈತನು ನಮಗೆ ಗೊತ್ತಿಲ್ಲದ ಹಾಗೇ ಮೇಲೆ ಹೇಳಿದ ಎರಡು ಜಮೀನುಗಳನ್ನು ದಾವಾ ಆಸ್ತಿಗಳಲ್ಲಿ ನನಗೆ ಪಾಲು ಸಿಗಬಾರದು ಎಂದು ಮಾರಾಟ ಮಾಡಿರಬಹುದು ಎಂದು ನುಡಿಯುತ್ತಾಳೆ.

20) ಸದರಿ ಡಿಳ್ಳೆಪ್ಪ ಈತನು ಸರ್ವೆ ನಂಬರಃ 404/1 ಮತ್ತು ಸರ್ವೆ ನಂಬರಃ 403/2 ಎರಡೂ ಆಸ್ತಿಗಳನ್ನು ಮಾರಾಟ ಮಾಡಿದ ನಂತರ ಈಗಲೂ ಸಹ ಎರಡೂ ಆಸ್ತಿಗಳು ಕಂದಾಯ ದಾಖಲಾತಿಗಳಲ್ಲಿ 8 ನೇ ಪ್ರತಿವಾದಿಯ ಸ್ವತಃ ಕಬ್ಜೆಯಲ್ಲಿ ಮತ್ತು ವಹಿವಾಟಿಯಲ್ಲಿರುತ್ತವೆ ಅಂದರೆ ಸರಿ, ಆದರೆ ಡಿಳ್ಳೆಪ್ಪ ನನಗೆ ತಿಳಿಯದಂತೆ ಎರಡೂ ಆಸ್ತಿಗಳನ್ನು ಮಾರಾಟ ಮಾಡಿರುತ್ತಾನೆ. ನಮ್ಮ ತಂದೆ ಮೃತಪಟ್ಟ ನಂತರ ದಾವಾ ಆಸ್ತಿಗಳು ನನ್ನ ಹೆಸರಿನಲ್ಲಿ ಮತ್ತು ಕಾಳಪ್ಪನ ಹೆಸರಿನಲ್ಲಿ ವಾರಸಾ ಸ್ವರೂಪವಾಗಿ ಬಂದ ನಂತರ ನಾನು ನನ್ನ ಪಾಲಿನ ಆಸ್ತಿಗಳನ್ನು ನನ್ನ ಸಹೋದರನಾದ ಕಾಳಪ್ಪ ಈತನ ಹೆಸರಿನಲ್ಲಿ ಬಿಟ್ಟುಕೊಟ್ಟಿದ್ದೇನೆ ಎನ್ನುವ ವಿಷಯ ಸುಳ್ಳಾಗಿರುತ್ತದೆ ಎಂದು ತಿಳಿದುಕೊಂಡ ಬಳಿಕ ಆ ವಿಷಯ ಯಾವುದೇ ಪ್ರಾಧಿಕಾರದಲ್ಲಾಗಲೀ ಮತ್ತು ನ್ಯಾಯಾಲಯದಲ್ಲಾಗಲೀ ಪ್ರಶ್ನೆ ಮಾಡಿರುವದಿಲ್ಲ.

21) ಡಿಳ್ಳೆಪ್ಪ ಈತನು ಸರ್ವೆ ನಂಬರಃ 404/1 ಮತ್ತು 403/2 ಎರಡೂ ಅಸ್ತಿಗಳನ್ನು 8 ನೇ ಪ್ರತಿವಾದಿಗೆ ಖರೀದಿ ಪತ್ರದ ಮುಖಾಂತರ ಖರೀದಿ ಮಾಡಿಕೊಟ್ಟರೂ ಸಹ ನಾನು 8 ರಿಂದ 10 ನೇ ಪ್ರತಿವಾದಿಗಳ

ವಿರುದ್ದ ಈ ಸುಳ್ಳು ದಾವೆಯನ್ನು ದಾಖಲುಪಡಿಸಿದ್ದೇನೆ ಅಂದರೆ ಸರಿಯಲ್ಲ. ಸದರಿ ಎರಡೂ ಆಸ್ತಿಗಳು ಖರೀದಿ ಆದ ದಿನಾಂಕದಿಂದ 2021 ರವರೆಗೆ ನಾನು ಅದರ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವದಿಲ್ಲ ಅಂದರೆ ಸರಿ.

**ಮರು ವಿಚಾರಣೆ ಇಲ್ಲಾ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.